



ವೈ.ಎನ್. ಕೃಷ್ಣಮೂರ್ತಿ, ರಾಮಾಂಜನೇಯನಗರ

*ಕಣ್ಣು ಮಿಟುಕಿಸುವುದಕ್ಕೂ, ಕಣ್ಣು ಹೊಡೆಯುವುದಕ್ಕೂ ವ್ಯತ್ಯಾಸವೇನು?*



ಕಣ್ಣು ಮಿಟುಕಿಸಿದರೆ ಸನ್ನೆಯ ವಿನಿಮಯ, ಕಣ್ಣು ಹೊಡೆದರೆ ಕೆನ್ನೆ ಉರಿಮಯ!

ವಿ.ಹಮೀದ್, ವಿಟ್ಲ

*ಅಮ್ಮಾವ್ರ ಗಂಡನಾದ ವ್ಯಕ್ತಿ ಅಮ್ಮಾವ್ರಿಂದ ಬಿಡುಗಡೆಯಾಗುವುದು ಹೇಗೆ?*

ಬಹಳ ಸುಲಭ. ಉಸಿರಾಡುವುದನ್ನು ನಿಲ್ಲಿಸಿಬಿಟ್ಟರಾಯ್ತು!

ಅಮರಯ್ಯ ಪತ್ರಿಮಠ, ಸುರಪೂರ

*ಪುನರ್ಜನ್ಮದಲ್ಲಿ ನೀವು ಏನಾಗಬೇಕೆಂದುಕೊಂಡಿರುವಿರಿ?*

ಕ್ಷಮಿಸಿ. ನನಗೆ ಪುನರ್ಜನ್ಮವಿಲ್ಲ; ಸಾವೂ ಇಲ್ಲ! ಈ ಅಂಕಣ ಬರೆದುದರಿಂದ ನಾನು ಚಿರಂಜೀವಿ!

ಮೊಳಕಾಲ್ಮೂರು ಸುರೇಶ, ಬಳ್ಳಾರಿ

*ಅಲ್ರೀ, ಜಾಣ ರಾಜಕಾರಣಿಗೂ, ದಡ್ಡ ರಾಜಕಾರಣಿಗೂ ಇರುವ ವ್ಯತ್ಯಾಸ?*



ಕಾಂಗ್ರೆಸ್ ಮತ್ತು ಬಿಜೆಪಿಗೆ ಇರುವ ವ್ಯತ್ಯಾಸವೇ!

ಎಂ.ಕೆ. ರಾಜೇಶ್, ಚಾಮರಾಜನಗರ

*ಎಲ್ಲಾ ಜನರು ಸಮಯಕ್ಕೆ ಸರಿಯಾಗಿ ಜವಾಬ್ದಾರಿಯುತವಾಗಿ ತಮ್ಮ ಕರ್ತವ್ಯ ನಿರ್ವಹಿಸಿದರೆ?*

ಏನೇನೂ ಚೆನ್ನಾಗಿರಲ್ಲ; ಡೌಟು, ಸಸ್ಪೆನ್ಸು ಇದ್ದಾಗಲೇ ಜೀವನ ಚೆನ್ನ!

ಬಿ. ಚಂದ್ರೇಗೌಡ, ಬೆಂಗಳೂರು

*ಕೂಡಿ ಬಾಳಿದರೆ ಸ್ವರ್ಗಸುಖ ಅನ್ನೋದು ನಿಜವೆ?*

ಕೂಡಿ ಅಷ್ಟೇ ಅಲ್ಲ, ಕಷ್ಟಗಳನ್ನು ಕಳೆದು, ಸಂತೋಷಗಳನ್ನು ಗುಣಿಸಿ, ದೋಷಗಳನ್ನು ಭಾಗಾಕಾರ ಮಾಡಿದರೆ ಸ್ವರ್ಗಸುಖ!

ಹೆಚ್.ಎಂ. ಅನಂತಪದ್ಮನಾಭ, ಮೈಸೂರು

*ಹುಚ್ಚನಿಗೂ, ತುಂಬಾ ಓದಿದವನಿಗೂ ಏನು ವ್ಯತ್ಯಾಸ? ಗಂಭೀರವಾದ ಉತ್ತರ ಹೇಳಿ.*

ಹುಚ್ಚ ಕವಿಯಾಗಬಲ್ಲ, ತುಂಬಾ ಓದಿದವನು ವಿಮರ್ಶಕ!

ಜಾಕೋಬ್ ಡಿಸೋಜ, ಕುರುವಳ್ಳಿ

*ಮನೆಯೊಂದು ಕಟ್ಟಿದ ಹಾಗೆ ಕನಸು ಕಂಡೆ. ಮುಂದೆ...?*

ಕಂಟ್ರಾಕ್ಟರ್ ದುಡ್ಡು ಕೇಳುವಂತಹ ದುಃಸ್ವಪ್ನ ಕಾದಿದೆ!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

*ಕಣ್ಣು ನೋಡು ಅನ್ನುತ್ತೆ, ಹೃದಯ ಮಾತಾಡಿಸು ಅನ್ನುತ್ತೆ. ಆದರೆ ಅವಳಿಗೆ ಇದನ್ನು ಹೇಗೆ ಹೇಳುವುದು?*

ಬೆರಳು ಎಸ್‌ಎಂಎಸ್ ಕಳುಹಿಸಲಿ; ಥಟ್ಟಂತ ಚ್ಯಾಟ್ ಆಗತ್ತೆ!

ಆರ್. ಶಿಲ್ಪಿ, ಬನ್ನೂರು

*ದೇವರಿಗೆ ತಣ್ಣೀರು ಸ್ನಾನ, ಪೂಜಾರಿಗೆ ಬಿಸಿನೀರು ಸ್ನಾನ. ಇದು ಯಾವ ನ್ಯಾಯ?*

ಕಿಟಕಿ ಇರದ ಗರ್ಭಗುಡಿಯಲ್ಲಿ ಬಹಳ ಬೆವೆತ ದೇವ ತಣ್ಣೀರೇ ಬೇಕೆನ್ನುವನಂತೆ!

ನೇ.ಗೋ.ಭ. ಕುಕ್ಕೆ ಸುಬ್ರಹ್ಮಣ್ಯ

*ನಿಮ್ಮ ಉತ್ತರಗಳಲ್ಲಿ ಹಿಂದೂಗಳಿಗೆ ಮಾತ್ರ ಟಾಂಟ್ ಬರುವುದೇಕೆ? ಪರಮತಗಳೆಂದರೆ ನಿಮಗೆ ಭಯವೋ ಅಥವಾ ಹಿಂದುತ್ವವೆಂದರೆ ತಾತ್ಸಾರವೋ?*

ಅಜ್ಜನೊಂದಿಗೆ ಸಲಿಗೆ, ಅತಿಥಿಗಳೊಡನೆ ಮಿತಭಾಷೆ ಭಾರತದ ಪದ್ಧತಿ. ಹಿಂದುತ್ವ ನನಗೆ ಅಜ್ಜ!

ಗೀತಾ ಬರ್ಲ, ಬೆಂಗಳೂರು

*ರಾಜಕಾರಣಿಗಳಿಗೂ, ತಿಗಣೆಗಳಿಗೂ ಏನು ವ್ಯತ್ಯಾಸ?*

ತಿಗಣೆ ಕುರ್ಚಿಯಿಂದ ಹೊರಬಂದು ಕಚ್ಚುತ್ತದೆ, ರಾಜಕಾರಣಿ ಕುರ್ಚಿಯಲ್ಲೇ ಕಚ್ಚಿಕೊಂಡು ಇರುತ್ತಾನೆ!

## ಬಹುಮಾನಿತ ಪ್ರಶ್ನೆ

ಚೈತ್ರಾ, ಕರಲಕಟ್ಟೆ

*ಆಟೋಗೆ ಏಕೆ ಮೂರು ಚಕ್ರ?*

ನಾಲ್ಕನೆಯ ಚಕ್ರ ಇದ್ದರೆ ಎಲ್ಲೆಡೆಯೂ ಮೂಗು ತೂರಿಸಿದಂತೆ ತೂರಿಸಿಕೊಂಡು ಹೋಗಲು ಆಗದಲ್ಲಾ!

ಕುಬೇರಪ್ಪ ಎಂ. ವಿಭೂತಿ, ಹರಿಹರ

*ಮರಣಕ್ಕೆ ಹತ್ತಿರವಾಗುವ ಜನ್ಮದಿನವನ್ನು ಸಂಭ್ರಮದ ನಡುವೆ ಆಚರಿಸಿಕೊಳ್ಳುವುದೇಕೆ?*

ನೀವೂ ಸರಿ ಸಾರ್... ಕಡೆಗೂ ಕಾಫಿನ್ನೇ ಗಟ್ಟಿ ಎಂದು ಈಗಲೇ ಕಾಫಿನ್ನಿನಲ್ಲಿ ಮಲಗಬೇಕೆ? ಮಂಚದ ಕಾಲ ಮಂಚಕ್ಕೆ, ಗೋರಿಯ ಕಾಲ ಗೋರಿಗೆ!

ಕೆ.ವಿ. ಶಿವಕುಮಾರ್ ಕಾಳೀಹುಂಡಿ, ಮೈಸೂರು

*ಅವಳು ಅಕಸ್ಮಾತ್ ಸಿಕ್ಕಳು, ನನ್ನ ನೋಡಿ ನಕ್ಕಳು. ಮುಂದೆ...?*

ಕಣ್ಣು ಹೊಡೆದೆ ಸನಿಹ ಬಂದು ಎರಡು ಹಲ್ಲು ಮುರಿದಳು!

ಮಲ್ಲನಗೌಡ ಸಿ. ಪಾಟೀಲ, ರಂಭಾಪೂರ

*ಪ್ರಪಂಚದಲ್ಲಿ ಸುಂದರವಾಗಿ ಕಾಣುವ ವಸ್ತು ಯಾವುದು?*



ಆಗತಾನೇ ಹುಟ್ಟಿದ ಮಗುವನ್ನು ಕಂಡ ತಾಯಿಯ ಮುಖ!

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

*ರಸವೇ ಚುನಾವಣೆ, ವಿರಸವೇ ಫಲಿತಾಂಶ, ಸಮರಸವೇ...?*

ಸಮ್ಮಿಶ್ರ ಸರ್ಕಾರ!

ಸಾರಂಗ್, ಬೆಂಗಳೂರು

*ಗುರೂಜಿ ಆಗಬೇಕಾದರೆ ಉದ್ದ ಕೂದಲು, ಉದ್ದುದ್ದ ಗಡ್ಡ ಬಿಟ್ಟು ಡೈ ಮಾಡಲೇಬೇಕಾ?*

ಅಷ್ಟೇ ಶ್ರಮಕ್ಕೆ ಆಶ್ರಮ ದೊರೆಯುವಾಗ ಡೈ ಮಾಡಕ್ಕೇನು ದಾಡಿ...?

ಎಚ್. ಆನಂದ್ ಕುಮಾರ್, ಚಿತ್ರದುರ್ಗ

*ರಾಮ್, ನೀವು ರಮ್ ಪ್ರಿಯರೋ, ರಮ್ಮಿ ಪ್ರಿಯರೋ, ಇಲ್ಲ ರಮ್ಯಾ ಪ್ರಿಯರೋ?*

ಕೇ–ರಮ್ ಪ್ರಿಯ!

■ ರಾಮ್